**ಕರ್ನಾಟಕ ಸರ್ಕಾರ**

ನಂ.ಗ್ರಾಅಪ/438/ಗ್ರಾಪಂಕಾ 2012

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 20-06-2013

ಇಂದ,

ಸರ್ಕಾರದ ಕಾರ್ಯದರ್ಶಿ,
ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
**ಬೆಂಗಳೂರು.**

ಇವರಿಗೆ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಎಲ್ಲಾ ಜಿಲ್ಲಾ ಪಂಚಾಯತ್‌ಗಳು.

ಮಾನ್ಯರೇ,

ವಿಷಯ: ಗ್ರಾಮ ಪಂಚಾಯಿತಿಗಳಲ್ಲಿನ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳಿಗೆ ಇಲಾಖಾ ಪರೀಕ್ಷೆಗಳನ್ನು ನಿಗದಿಪಡಿಸಿರುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 4 ಎಸ್‌ಎಸ್‌ಆರ್ 2009, ದಿನಾಂಕ: 23-12-2011.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 2 ಎಸ್‌ಎಸ್‌ಆರ್ 2012, ದಿನಾಂಕ: 08-04-2013.

----

150
ಹೊರಡಿಸಿದೆ
ದಿನಾಂಕ 21/6
ಗ್ರಾ.ಅ.ಪಂ. ಇಲಾಖೆ

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳ ಕಡೆಗೆ ತಮ್ಮ ಗಮನ ಸೆಳೆಯಲಾಗಿದೆ.

ಉಲ್ಲೇಖ (1) ರ ಸರ್ಕಾರದ ಅಧಿಸೂಚನೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮ ಪಂಚಾಯಿತಿಗಳಲ್ಲಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್-1 ಮತ್ತು ಗ್ರೇಡ್-2 ಹುದ್ದೆಗಳಿಗೆ ಇಲಾಖಾ ಪರೀಕ್ಷೆಗಳನ್ನು ನಿಗದಿಪಡಿಸಿದೆ. (ಪ್ರತಿ ಲಗತ್ತಿಸಿದೆ)

ಉಲ್ಲೇಖ (2) ರ ಸರ್ಕಾರದ ಅಧಿಸೂಚನೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮ ಪಂಚಾಯಿತಿಗಳಲ್ಲಿನ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳಿಗೆ ಇಲಾಖಾ ಪರೀಕ್ಷೆಗಳನ್ನು ನಿಗದಿಪಡಿಸಿದೆ. (ಪ್ರತಿ ಲಗತ್ತಿಸಿದೆ)

ಗ್ರಾಮ ಪಂಚಾಯಿತಿಗಳಲ್ಲಿನ ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಪರೀಕ್ಷಾರ್ಥ ಅವಧಿಯಲ್ಲಿ (1) ಕಮ್ಯೂನಿಟಿ ಡೆವಲಪ್‌ಮೆಂಟ್ ಭಾಗ-1 ಮತ್ತು ಭಾಗ-2 ಹಾಗೂ (2) ಅಕೌಂಟ್ಸ್ ಲೋಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕಾಗುತ್ತದೆ ಎಂದು ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

20/6/13
(ಮಾರ್ಗರೇಟ್ ಲೀನಾ ನರೋನ್ಹ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# GOVERNMENT OF KARNATAKA

No. DPAR 4 SSR 2009

Karnataka Government Secretariat,
Vidhana Soudha,
Bangalore, Dated:23.12.2011.

## NOTIFICATION

Whereas, the draft of the following rules further to amend the Karnataka Civil Services (Service and Kannada Language Examinations) Rules,1974 was published as required by clause (a) of sub-section (2) of section 3 read with section 8 of the Karnataka State Civil Services Act, 1978 (Karnataka Act 14 of 1990), in Notification No. DPAR 4 SSR 2009 dated 23.4.2010 in part IV-A(No.473) of the Karnataka Gazette Extra-ordinary dated 4.5.2010 inviting objections and suggestions from the persons likely to be affected thereby within 15 days from the date of publication of the draft in the Official Gazette.

Whereas the said Gazette was made available to the public on 4.5.2010.

And, whereas objections and suggestions received have been considered by the State Government.

Now, therefore, in exercise of the powers conferred by sub-section(1) and section (3) read with section (8) of the Karnataka State Civil Services Act, 1978 (Karnataka Act 14 of 1990) the Government of Karnataka makes the following rules, namely:-

## RULES

**1. Title and commencement**.- (1) These rules may be called the Karnataka Civil Services (Service and Kannada Language Examinations) (3rd Amendment) Rules, 2011.

They shall come into force from the date of their publication in the Official Gazette.

**2. Amendment of SCHEDULE I.-** In SCHEDULE-I the Karnataka Civil Services (Service and Kannada Language Examinations) Rules, 1974, in Sl.No.6 under the heading Community Development Examinations Part-II after the words Community Development Manual the following shall be inserted " and Rural Development Schemes."

**3. Amendment of SCHEDULE II.-** In Schedule-II to the Karnataka Civil Services (Service and Kannada Language Examinations) Rules, 1974, for the entries relating to the Karnataka General Service (Development Branch) at serial number 16 and the entries relating thereto, the following shall be substituted, namely :-

| Service | Post | Service Examinations |
|---|---|---|
| 1 | 2 | 3 |
| 16. The Karnataka General Service (Dev. Branch) | Gazetted Officers | (1) Community Development Part I and II<br>(2) Revenue Higher Part I and II<br>(3) Accounts Higher<br>(4) General Law Part I and II |
| | Panchayat Development Officers | (1) Community Development |

| | | |
|---|---|---|
| | | Part I and II<br>(2) Accounts Higher<br>(3) General Law<br>Part I and II |
| | Gram Panchayat Secretary and Rural Development Assistant Grade-I, First Division Assistant/Stenographers(Personal Establishment of Development Commissioner) | (1)Community Development Part I and II<br>(2) Accounts Higher |
| | Second Division Assistants, Gram Panchayat Secretary Grade-II | (1) Community Development Part I and II<br>(2) Accounts Lower |

By Order and in the name of the
Governor of Karnataka

(DEVARAJU)
Under Secretary to Government,
Department of Personnel & Administrative Reforms
(Service Rules-1)

To:

The Compiler, Karnataka Gazette, Bangalore, for publication in the Extra-ordinary Gazette and to supply 100 copies to DPAR (Service Rules -A Section), Room No.31, Ground Floor, Vidhana Soudha, Bangalore-1.

**Copy to:**

1. The Chief Secretary to Government.,Vidhana Soudha, Bangalore.
2. Addl. Chief Secretary and Development Commissioner, Vidhana Soudha, Bangalore.
3. The Principal Secretary, Rural Development and Panchayat Raj Dept.
4. The Accountant General, Karnataka, Bangalore-1
5. All the Regional Commissioners
6. All the Heads of Departments
7. Deputy Commissioners of all Districts.
8. Chief Executive Officers of all Districts.
9. The Private Secretary to Chief Minister, Vidhana Soudha, Bangalore
10. *The Principal Secretary / Secretary, Karnataka Legislative Assembly/Council, Vidhana Soudha, Bangalore-560 001
11. *The Secretary, Karnataka Public Service Commission, Udyoga Soudha, Bangalore-1
12. *The Registrar General, High Court of Karnataka, Bangalore-1
13. *The Registrar, Karnataka Administrative Tribunal, Indiranagar, Bangalore-38
14. *The Registrar, Karnataka Lokayukta, Bangloare-1
15. Weekly Gazette / SGF / Spare Copies.

(*With a covering letter)

RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ


| ಭಾಗ - IV-A | ಬೆಂಗಳೂರು, ಸೋಮವಾರ, ಏಪ್ರಿಲ್ ೮, ೨೦೧೩ (ಚೈತ್ರ ೧೮, ಶಕ ವರ್ಷ ೧೯೩೪) | ನಂ. ೬೭೬ |
|---|---|---|
| Part - IV-A | Bangalore, Monday, April 8, 2013 (Chaithra 18, Shaka Varsha 1934) | No. 676 |


ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 2 ಎಸ್‌ಎಸ್‌ಆರ್ 2012, ಬೆಂಗಳೂರು, ದಿನಾಂಕ: 08.04.2013

ಕರ್ನಾಟಕ ಸಿವಿಲ್ ಸೇವೆಗಳು (ಸೇವೆಗಳು ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990ರ ಅಧಿನಿಯಮ ಸಂಖ್ಯೆ:14)ರ 3ನೇ ಪ್ರಕರಣದ 2(ಎ) ಉಪ ಪ್ರಕರಣವನ್ನು ಪ್ರಕರಣ 8ರೊಂದಿಗೆ ಓದಿಕೊಂಡು ಅದರಲ್ಲಿ ಅಗತ್ಯಪಡಿಸಲಾದಂತೆ, ಕರಡು ನಿಯಮಗಳನ್ನು ದಿನಾಂಕ:31.1.2013ರ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ ಭಾಗ(4–ಎ)(ನಂ–101)ದಲ್ಲಿ ಅಧಿಸೂಚನೆ ಸಂಖ್ಯೆ:ಸಿಆಸುಇ 2 ಎಸ್‌ಎಸ್‌ಆರ್ 2012 ದಿನಾಂಕ:31.1.2013ರಲ್ಲಿ ಪ್ರಕಟಿಸಿ ಅದರಿಂದ ಬಾಧಿತರಾಗಬಹುದಾದಂತಹ ವ್ಯಕ್ತಿಗಳಿಂದ ಅಧಿಕೃತ ರಾಜ್ಯಪತ್ರದಲ್ಲಿ ಆ ಕರಡು ನಿಯಮಗಳು ಪ್ರಕಟವಾದ ದಿನಾಂಕದಿಂದ 15 ದಿನಗಳ ಒಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿತ್ತು.

ಸದರಿ ರಾಜ್ಯಪತ್ರವನ್ನು ದಿನಾಂಕ 31ನೇ ಜನವರಿ 2013 ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಲಾಗಿತ್ತು. ಈ ಬಗ್ಗೆ ಯಾವುದೇ ಆಕ್ಷೇಪಣೆ ಮತ್ತು ಸಲಹೆಗಳನ್ನು ಸರ್ಕಾರ ಸ್ವೀಕರಿಸಿರುವುದಿಲ್ಲ.

ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990ರ ಅಧಿನಿಯಮ ಸಂಖ್ಯೆ:14)ರ 3ನೇ ಪ್ರಕರಣದ 1ನೇ ಉಪ ಪ್ರಕರಣವನ್ನು 8 ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಗಿನ ನಿಯಮಗಳನ್ನು ರಚಿಸುತ್ತದೆ.ಎಂದರೆ:–

ನಿಯಮಗಳು

1. ಶಿರೋನಾಮೆ ಮತ್ತು ಪ್ರಾರಂಭ.–

(1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವೆಗಳು (ಸೇವೆಗಳು ಮತ್ತು ಕನ್ನಡ ಭಾಷಾ ಪರೀಕ್ಷೆಗಳು) (1ನೇ ತಿದ್ದುಪಡಿ) ನಿಯಮಗಳು, 2013 ಎಂದು ಕರೆಯತಕ್ಕದ್ದು.

(2) ಇದು ರಾಜ್ಯಪತ್ರದಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಷೆಡ್ಯೂಲ್–IIರ ತಿದ್ದುಪಡಿ.– ಕರ್ನಾಟಕ ಸಿವಿಲ್ ಸೇವೆಗಳು (ಸೇವೆಗಳು ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ರ ಷೆಡ್ಯೂಲ್–IIರ ಕ್ರಮ ಸಂಖ್ಯೆ: 16ರ ಕಲಂ 2ರಲ್ಲಿ ಕರ್ನಾಟಕ ಸಾಮಾನ್ಯ ಸೇವೆಗಳು (ಡೆವಲಪ್‌ಮೆಂಟ್ ಬ್ರಾಂಚ್) ಇದಕ್ಕೆ ಸಂಬಂಧಿಸಿದಂತೆ, "ದ್ವಿತೀಯ ದರ್ಜೆ ಸಹಾಯಕರು, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್–II" ಪದಗಳ ನಂತರ "ದ್ವಿತೀಯ ದರ್ಜೆ ಲೆಕ್ಕ ಸಹಾಯಕರು" ಎಂಬ ಪದಗಳನ್ನು ಸೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಡಾ: ಮಂಗಳ. ಜಿ.ಎಸ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು–1)

**PERSONNEL & ADMINISTRATIVE REFORMS SECRETARIAT**

**NOTIFICATION**

**No. DPAR 2 SSR 2012, Bangalore, Dated: 08.04.2013**

Whereas, the draft of the following Rules further to amend the Karnataka Civil Services (Service and Kannada Language Examinations) Rules, 1974 was published as required by clause (a) of sub-section (2) of section 3 read with section 8 of the Karnataka State Civil Services Act, 1978 (Karnataka Act 14 of 1990), in Notification No. DPAR 2 SSR 2012 dated 31.1.2013 in part IV-A(No.101) of the Karnataka Gazette Extra-ordinary dated 31.1.2013 inviting objections and suggestions from the persons likely to be affected thereby within 15 days from the date of publication of the draft in the Official Gazette.

Whereas the said Gazette was made available to the public on 31.1.2013.

And, whereas no objections and suggestions have been received by the State Government.

Now, therefore, in exercise of the powers conferred by sub-section(1) and section (3) read with section (8) of the Karnataka State Civil Services Act, 1978 (Karnataka Act 14 of 1990) the Government of Karnataka makes the following rules, namely:-

**RULES**

**1. Title and Commencement:-**

(1) These rules may be called the Karnataka Civil Services (Service and Kannada Language Examinations) (I Amendment)Rules,2013.

(2) They shall come into force from the date of their publication in the Official Gazette.

**2. Amendment of Schedule- II.-** In Schedule – **II** to the Karnataka Civil Services (Service and Kannada Language Examinations) Rules, 1974, in the entries relating to the "Karnataka General Service (Development Branch)" at serial number 16, in column No(2), after the words "Second Division Assistants, Grama Panchayat Secretary Grade-II" the words "Second Division Account Assistant", shall be inserted.

By Order and in the name of the Governor of Karnataka,

**Dr.Mangala.G.S.**
Under Secretary to Government,
Department of Personnel & Administrative Reforms
(Service Rules-1)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) (೫೦೦ ಪ್ರತಿಗಳು)